ಆ. ಒಂದಂಕಿ ಲಾಟರಿ ಟಿಕೇಟುಗಳು ಕರ್ನಾಟಕ ರಾಜ್ಯದಲ್ಲಿ ಮಾರಾಟವಾಗುವ ರಾಜ್ಯಗಳ ಹೆಸರುಗಳು

1. ಅರುಣಾಚಲ ಪ್ರದೇಶ
2. ಸಿಕ್ಕಿಂ
3. ಅಸ್ಸಾಂ
4. ಪಂಜಾಬ್
5. ಮಿಜೋರಾಂ
6.ನಾಗಾಲ್ಯಾಂಡ್
7. ರಾಜಾಸ್ಥಾನ್
8. ಹರಿಯಾಣ
9. ಉತ್ತರ ಪ್ರದೇಶ
10. ದೆಹಲಿ ಅಭಿವೃದ್ಧಿ ಪ್ರಾಧಿಕಾರ
11. ಹಿಮಾಚಲ ಪ್ರದೇಶ

ಕರ್ನಾಟಕ ರಾಜ್ಯದಲ್ಲಿ ಇತರೆ ಲಾಟರಿ ಟಿಕೇಟುಗಳು ಮಾರಾಟವಾಗುವ ರಾಜ್ಯಗಳ ಹೆಸರು

1. ಅರುಣಾಚಲ ಪ್ರದೇಶ
2.ಸಿಕ್ಕಿಂ
3. ಅಸ್ಸಾಂ
4. ಪಂಜಾಬ್
5.ಮಿಜೋರಾಂ
6. ನಾಗಾಲ್ಯಾಂಡ್
7. ರಾಜಾಸ್ಥಾನ್
8. ಹರಿಯಾಣ
9. ಉತ್ತರ ಪ್ರದೇಶ
10. ದೆಹಲಿ ಅಭಿವೃದ್ಧಿ ಪ್ರಾಧಿಕಾರ
11. ಹಿಮಾಚಲ ಪ್ರದೇಶ
12. ಗೋವಾ

ಆ. ಸುಮಾರು 100 ಕೋಟಿಗಳು.

ಇ. ಇಲ್ಲ.

ಈ. ಇಲ್ಲ

ಉ. ಇತರೆ ರಾಜ್ಯಗಳ ಒಂದಂಕಿಯ ಲಾಟರಿ ಮಾರಾಟವನ್ನು ರದ್ದುಪಡಿಸಲು ಸರ್ಕಾರ ಇಚ್ಛಿಸುತ್ತಾದರೂ ಕಾನೂನು ಅಡಚಣೆಗಳಿರುವುದರಿಂದ ಇದುವರೆವಿಗೂ ಇದನ್ನು ರದ್ದು ಮಾಡಲು ಸಾಧ್ಯವಾಗಿರುವುದಿಲ್ಲ.

ಮಲೆನಾಡು ಅಭಿವೃದ್ಧಿ ಯೋಜನೆಗೆ ಒದಗಿಸಿರುವ ಹಣ

1239 (2021): ಬಿ. ಶಿವರಾಮು (ಗಂಡಸಿ):–

ಮಾನ್ಯ ಪರಿಸರ ಮತ್ತು ಜೀವ ಪರಿಸರ ಶಾಸ್ತ್ರ ಹಾಗೂ ವಿಜ್ಞಾನ, ತಂತ್ರಜ್ಞಾನ ಮತ್ತು ಮಲೆನಾಡು ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ ?

ಅ. ಮಲೆನಾಡು ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ 1993–94ನೇ ಆಯವ್ಯಯದಲ್ಲಿ ಒದಗಿಸಿರುವ ಹಣವೆಷ್ಟು;

ಆ. ಎಷ್ಟು ತಾಲ್ಲೂಕುಗಳನ್ನು ಅಭಿವೃದ್ಧಿ ಯೋಜನೆಗಳು ಒಳಗೊಂಡಿವೆ;

ಇ. ಅಭಿವೃದ್ಧಿ ಯೋಜನೆಯಡಿಯಲ್ಲಿ ಯಾವಾಗ ಇಲಾಖೆಯ ಕೆಲಸವನ್ನು ತೆಗೆದುಕೊಳ್ಳಲು ಆದ್ಯತೆ ನೀಡಿದೆ;

ಈ. ಅಭಿವೃದ್ಧಿ ಕಾರ್ಯಕ್ರಮಗಳ ಮಂಜೂರಾತಿಯನ್ನು ಯಾವುದಾದರೂ ಜಿಲ್ಲೆಗೆ ಮಾಡಿದೆಯೆ ?

ಶ್ರೀ ಎನ್.ಜಿ. ಹಾಲಪ್ಪ (ಪರಿಸರ ಮತ್ತು ಜೀವ ಪರಿಸರ ಶಾಸ್ತ್ರ ಹಾಗೂ ವಿಜ್ಞಾನ, ತಂತ್ರಜ್ಞಾನ

ಮತ್ತು ಮಲೆನಾಡು ಅಭಿವೃದ್ಧಿ ರಾಜ್ಯ ಸಚಿವರು):–

ಅ. 35.00 ಕೋಟಿ ರೂ.ಗಳು.

ಆ. 58

ಇ. ಆದ್ಯತೆಗಳನ್ನು ಮಂಡಳಿಯು ನಿರ್ಧರಿಸುತ್ತದೆ.

ಈ. ಇಲ್ಲ.

ಸಾರ್ವಜನಿಕ ಕುಂದುಕೊರತೆಗಳ ನಿವಾರಣೆಗಾಗಿ ಬಂದ ಅರ್ಜಿಗಳ ಸಂಖ್ಯೆ

1243 (1892): ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):–

ಮಾನ್ಯ ಪ್ರವಾಸೋದ್ಯಮ ಮತ್ತು ಸಾರ್ವಜನಿಕ ದೂರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ ?

ಅ. ರಾಜ್ಯದಲ್ಲಿ ಸನ್ 1990–91ಹಾಗೂ 92–93ನೇ ಸಾಲಿನಲ್ಲಿ ಎಷ್ಟು ಅರ್ಜಿಗಳು ಸಾರ್ವಜನಿಕರ ಕುಂದುಕೊರತೆಗಳ ನಿವಾರಿಸುವ ಸಲುವಾಗಿ ಬಂದಿರುತ್ತವೆ;

ಆ. ಸಾರ್ವಜನಿಕರಿಂದ ಕುಂದುಕೊರತೆಗಳನ್ನು ನಿವಾರಿಸುವ ಸಲುವಾಗಿ ಬಂದ ಅರ್ಜಿಗಳಲ್ಲಿ ಎಷ್ಟು ಅರ್ಜಿಗಳು ನಿಕಾಲೆಯಾಗಿರುತ್ತವೆ;

ಇ. ಸಾರ್ವಜನಿಕರು ತಮ್ಮ ಕುಂದುಕೊರತೆಗಳ ಸಲುವಾಗಿ ಬಂದ ಅರ್ಜಿಗಳಿಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಹಾಗೂ ಸಾರ್ವಜನಿಕರಿಂದ ವಿಶ್ವಾಸ ಮೂಡಿರುವುದಿಲ್ಲವೆಂಬ ಸಂಗತಿ ನಿಜವೇ;

ಈ. ಬೆಳಗಾವಿ ಜಿಲ್ಲೆಯ ಸಾರ್ವಜನಿಕರಿಂದ ತಮ್ಮ ಕುಂದುಕೊರತೆಗಳನ್ನು ನಿವಾರಿಸುವ ಸಲುವಾಗು ಎಷ್ಟು ಅರ್ಜಿಗಳು ಭಂದಿರುತ್ತವೆ;

ಉ. ಬೆಳಗಾವಿ ಜಿಲ್ಲೆಯ ಸಾರ್ವಜನಿಕರಿಂದ ಬಂದ ಅರ್ಜಿಗಳಲ್ಲಿ ಎಷ್ಟು ಅರ್ಜಿಗಳು ನಿಕಾಲೆಯಾಗಿರುತ್ತವೆ ? (ತಾಲೂಕುವಾರು ವಿವರ ಕೊಡುವುದು);

ಊ. ಸಾರ್ವಜನಿಕರು ತಮ್ಮ ಕುಂದುಕೊರತೆಗಳನ್ನು ನಿವಾರಿಸುವ ಸಲುವಾಗಿ ವಿನಂತಿಸಿಕೊಂಡಾಗ ಅದರ ಮೇಲೆ ಯಾವುದೇ ಕ್ರಮವನ್ನು ಕೈಗೊಂಡ ಬಗ್ಗೆ ಉತ್ತರ ಕೊಡದೇ ಸಂಬಂಧಿಸಿದ ಅಧಿಕಾರಿಗಳು ಸುಮ್ಮನೇ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಋ. ಹಾಗಿದ್ದಲ್ಲಿ ಸಾರ್ವಜನಿಕರ ಕುಂದುಕೊರತೆಗಳನ್ನು ನಿವಾರಿಸಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು;

ೠ. ಸಾರ್ವಜನಿಕರ ಹಿತದೃಷ್ಟಿಯಿಂದ ಚುನಾಯಿತ ಪ್ರತಿನಿಧಿ, ವಿಧಾನಸಭಾ ಸದಸ್ಯನಾಗಲೀ ಯಾವುದೇ ಅಧಿಕಾರಿಗೆ ಪತ್ರ ಬರೆದಾಗ ಆ ಪತ್ರದ ಮೇಲೆ ಕೈಗೊಂಡ ಕ್ರಮವನ್ನು ಚುನಾಯಿತ ಪ್ರತಿನಿಧಿಗೆ ತಿಳಿಸಬೇಕಾಗುವುದೇ;

ಎ. ಒಂದು ವೇಳೆ ತಿಳಿಸದೇ ಇದ್ದಲ್ಲಿ ಅಂಥ ಅಧಿಕಾರಿಗಳ ಮೇಲೆ ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ದೂರು ರಾಜ್ಯ ಸಚಿವರು):